ಅಯೋಧ್ಯೆಯ ರಾಮ ಮಂದಿರದಲ್ಲಿ ನಡೆದ ದೇಣಿಗೆ ಹಣ ಕಳವು ಪ್ರಕರಣವನ್ನು ಹಾಲಿ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಆಗ್ರಹಿಸಿ ಅಭಿಯಾನ ಆರಂಭಿಸಲಾಗುವುದು.

• **ಎಸ್.ವಿ.ನಾಗರಾಜ್,** ಕಾಂಗ್ರೆಸ್ ರಾಜ್ಯ ಕಾನೂನು ವಿಭಾಗದ ಜಂಟಿ ಕಾರ್ಯದರ್ಶಿ

ಸ್ಥಳೀಯರಿಗೆ ಮಾರಕವಾದ ಔಷಧಿ ರಾಸಾಯನಿಕ ತ್ಯಾಜ್ಯ

ರ್‍ಯಾಕ್ಸ್ ಫಾರ್ಮ ಕೆಮ್ ಪ್ರೈವೇಟ್ ಲಿಮಿಟೆಡ್ ಕಂಪೆನಿ ಔಷಧಿಯಿಂದ ಅನಾರೋಗ್ಯ | ಜನ, ಪ್ರಾಣಿ ಪಕ್ಷಿಗಳಿಗೆ ಉಸಿರುಗಟ್ಟುವ ವಾತಾವರಣ

• **ಅರುಣ್ ಕುಮಾರ್‌ಎಸ್.ವಿ.**

ಕನ್ನಡಪ್ರಭ ವಾರ್ತೆ ಗೌರಿಬಿದನೂರು

ತಾಲೂಕಿನ ಕುಡುಮಲಕುಂಟೆ ಕೈಗಾರಿಕಾ ಪ್ರದೇಶದಲ್ಲಿರುವ ರ್‍ಯಾಕ್ಸ್ ಫಾರ್ಮ ಕೆಮ್ ಪ್ರೈವೇಟ್ ಲಿಮಿಟೆಡ್ (RACS)ಎಂಬ ಔಷಧಿ ಕಾರ್ಖಾನೆ ಔಷಧಿ ತಯಾರಿಸಿದ ಬಳಿಕ ಬರುವ ರಾಸಾಯನಿಕ ತ್ಯಾಜ್ಯವನ್ನು ಬಯಲು ಜಾಗದಲ್ಲಿ ಬಿಡುತ್ತಿರುವುದರಿಂದ ಕುಡುಮಲಕುಂಟೆ ಪ್ರದೇಶದಲ್ಲಿ ರಾತ್ರಿ ವೇಳೆ ಉಸಿರುಕಟ್ಟುವ ವಾತಾವರಣ ನಿರ್ಮಾಣವಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಕಾರ್ಖಾನೆಯವರು ರಾಸಾಯನಿಕ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡದೇ ಕಾರ್ಖಾನೆ ಕಾಂಪೌಂಡ್‌ಗೆ ರಂಧ್ರ ಮಾಡಿಕೊಂಡು ರಾತ್ರಿ ಹತ್ತು ಗಂಟೆಯ ನಂತರ ಪೈಪ್‌ಗಳನ್ನು ಅಳವಡಿಸಿಕೊಂಡು ಕಾರ್ಖಾನೆ ಹಿಂಭಾಗದ ಬಯಲು ಪ್ರದೇಶಕ್ಕೆ ನಿರಂತರವಾಗಿ ಹರಿಯಬಿಡಲಾಗುತ್ತಿದೆ, ಇದರಿಂದ ಈ ಭಾಗದ ವಾತಾವರಣ ವಿಷಪೂರಿತವಾಗಿ ಮಾರ್ಪಟ್ಟಿದೆ.

ಗ್ರಾಮಸ್ಥರು ರಾತ್ರಿ ಸಮಯದಲ್ಲಿ ಮಲಗಿದ್ದಾಗ ರಾಸಾಯನಿಕ ಹೊರಬಿಡುವುದರಿಂದ ಕೆಟ್ಟ ಮತ್ತು ಘಾಟು ವಾಸನೆ ಬರುತ್ತಿದೆ, ಇದರಿಂದ ಉಸಿರು ಕಟ್ಟುವ ಹಾಗೇ ವಾಸನೆ ಬರುತ್ತಿದೆ, ಈ ವಿಷ ಗಾಳಿಯ ಪರಿಣಾಮ ಕುಡುಮಲಕುಂಟೆ ಗ್ರಾಮದ ಮಕ್ಕಳು, ವೃದ್ಧರು ಸೇರಿದಂತೆ ಇಲ್ಲಿನ ಜನರ ಪ್ರಾಣಕ್ಕೆ ಕುತ್ತು ಬರುತ್ತಿದೆ. ಈ ಬಗ್ಗೆ ಕಾರ್ಖಾನೆ ಮುಂದೆ ಹಲವು ಬಾರಿ ಪ್ರತಿಭಟನೆ ನಡೆಸಿದರು ಯಾವುದೇ ಪ್ರಯೋಜನವಾಗಿಲ್ಲ ಎಂದು ಸ್ಥಳೀಯರು ಕಾರ್ಖಾನೆ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಈ ಕಾರ್ಖಾನೆ ಹಿಂಭಾಗದ ಪ್ರದೇಶದಲ್ಲಿ ನಿರಂತರವಾಗಿ ರಾಸಾಯನಿಕ ಬಿಡುತ್ತಿರುವ ಪರಿಣಾಮ ಎಕರೆಗಟ್ಟಲೆ ಬಯಲು ಪ್ರದೇಶದಲ್ಲಿ ಮಣ್ಣು ಕೊಚ್ಚಿಕೊಂಡು ಹೋಗಿ ಮರುಭೂಮಿಯಂತಾಗಿದೆ. ಹುಲ್ಲು ಕಡ್ಡಿ ಸಹ ಬೆಳೆಯುವ ಲಕ್ಷಣಗಳಿಲ್ಲ. ರಾಸಾಯನಿಕ ವ್ಯಾಪಿಸಿದ ಜಾಗದ ಸುತ್ತಮುತ್ತ ಬೆಳೆದಿರುವ ಗಿಡಗಂಟಿಗಳು ಒಣಗಿವೆ, ಈ ವಿಷ ರಾಸಾಯನಿಕದ ಅಗಾಧ ಪರಿಣಾಮಕ್ಕೆ ಕಲ್ಲುಗಳು ಸಹ ಕರಗುತ್ತಿವೆ.

ರಾಸಾಯನಿಕ ನಿರಂತರವಾಗಿ ಬಿಡುತ್ತಿರುವುದರಿಂದ ಕಾರ್ಖಾನೆ ಹೊರ ಭಾಗದ ಖಾಲಿ ಜಾಗದಲ್ಲಿ ನಿರಂತರವಾಗಿ ರಾಸಾಯನಿಕ ಜಿನುಗಿ ಹಳ್ಳಕ್ಕೆ ಸೇರುತ್ತಿದೆ, ಮಳೆ ಬಂದಾಗ ಪಕ್ಕದಲ್ಲಿರುವ ಕೆರೆಯ ಒಡಲಿಗೆ ಸೇರಿ ಪ್ರಾಣಿ ಪಕ್ಷಿಗಳ ಸಾವಿಗೆ ಕಾರಣವಾಗುವುದಲ್ಲದೆ, ಇದು ಅಂತರ್ಜಲ ಸೇರುತ್ತಿರುವುದರಿಂದ, ಸುತ್ತಮುತ್ತಲಿನ ಗ್ರಾಮಸ್ಥರ ಪ್ರಾಣಕ್ಕೆ ಕಂಟಕವಾಗಿ ಪರಿಣಮಿಸಿದೆ. ಇದನ್ನು ಮರೆಮಾಚಲು ಕಾರ್ಖಾನೆಯವರು ಪಕ್ಕದಲ್ಲಿರುವ ಮಣ್ಣಿನ ಗುಡ್ಡಗಳನ್ನು ಅಗೆದು ಮಣ್ಣಿನಿಂದ ರಾಸಾಯನಿಕವನ್ನು ಮುಚ್ಚುವ ಕೆಲಸ ನಿರಂತವಾಗಿ ಮಾಡುತ್ತಿದ್ದಾರೆ, ಆದರೆ ಇದನ್ನು ನಿಯಂತ್ರಿಸಬೇಕಾದ ಪರಿಸರ ನಿಯಂತ್ರಣ ಮಂಡಳಿ, ತಾಲೂಕು ಆಡಳಿತ, ತಾಲೂಕು ಪಂಚಾಯಿತಿ ಸಣ್ಣ ನೀರಾವರಿ, ಸೇರಿದಂತೆ ಸಂಬಂಧಪಟ್ಟ ಯಾವುದೇ ಇಲಾಖೆ ಈವರೆಗೆ ಕ್ರಮಕ್ಕೆಗೊಂಡಿಲ್ಲ ಎಂದು ಸ್ಥಳೀಯರು ಆರೋಪಿಸುತ್ತಿದ್ದಾರೆ.

ರ್‍ಯಾಕ್ಸ್ ಫಾರ್ಮ ಕೆಮ್ ಪ್ರೈವೇಟ್ ಲಿಮಿಟೆಡ್ ರಾಸಾಯನಿಕ ತ್ಯಾಜ್ಯವನ್ನು ಬಯಲು ಪ್ರದೇಶಕ್ಕೆ ನಿರಂತರವಾಗಿ ಹರಿಬಿಡುತ್ತಿರುವುದು.

ಸಾರ್ವಜನಿಕ ದೂರಿನ ಹಿನ್ನೆಲೆಯಲ್ಲಿ ಪಂಚಾಯಿತಿ ವತಿಯಿಂದ ಸ್ಥಳ ಪರಿಶೀಲನೆ ಮಾಡಿದಾಗ ರಾಸಾಯನಿಕ ನೀರು ಬಿಟ್ಟಿರುವುದು ಸತ್ಯಾಂಶ ಎಂದು ಕಂಡುಬಂದಿದೆ, ಈ ಹಿನ್ನೆಲೆಯಲ್ಲಿ ಮೂರು ದಿನಗಳ ಒಳಗೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು ನೋಟೀಸ್ ನೀಡಲಾಗಿದೆ, ತಪ್ಪಿದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು.

• **ಮೀನಾಕ್ಷಿ,** ದೊಡ್ಡಕುರುಗೋಡು ಪಿಡಿಒ.

ಗ್ರಾಮಸ್ಥರು ಮಲಗಿದ ಮೇಲೆ ರ್‍ಯಾಕ್ಸ್ ಕಾರ್ಖಾನೆಯವರು ರಾಸಾಯನಿಕವನ್ನು ಬಯಲು ಪ್ರದೇಶದಲ್ಲಿ ಬಿಡುತ್ತಾರೆ, ಗ್ರಾಮದ ಕಡೆ ಗಾಳಿ ಬೀಸುವುದರಿಂದ ರಾಸಾಯನಿಕದ ಗಬ್ಬು ವಾಸನೆ ಬರಲು ಪ್ರಾರಂಭಿಸುತ್ತದೆ, ಈ ವಾಸನೆಗೆ ಉಸಿರು ಕಟ್ಟುವಂತೆ ಭಾಸವಾಗುತ್ತದೆ, ಇದನ್ನು ವಿರೋಧಿಸಿ ಎರಡ್ಮೂರು ಬಾರಿ ಗ್ರಾಮಸ್ಥರೆಲ್ಲ ಕಾರ್ಖಾನೆ ಮುಂದೆ ಪ್ರತಿಭಟನೆ ಸಹ ಮಾಡಿದ್ದೆವು, ಕಾರ್ಖಾನೆಯವರು ಸಬೂಬುಗಳನ್ನು ಹೇಳಿ ಕಳಿಸಿದ್ದರು, ಆದರೆ ರಾಸಾಯನಿಕ ಬಿಡುವುದು ಇಂದಿಗೂ ನಿಂತಿಲ್ಲ.

• **ಕೃಷ್ಣಪ್ಪ,** ಸ್ಥಳೀಯರು.

ನನ್ನ ಗಮನಕ್ಕೆ ಬಂದ ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಕಾರ್ಖಾನೆ ಹಿಂಭಾಗದಲ್ಲಿ ನಿಂತಿದ್ದ ರಾಸಾಯನಿಕಯುಕ್ತ ನೀರು ಮತ್ತು ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳಿಸಲಾಗಿದೆ, ವರದಿ ಬಂದ ನಂತರ ಕಾನೂನು ಕ್ರಮ ಕೈಗೊಳ್ಳಲಾಗುವುದು.

• **ಮೀನಾಕ್ಷಿ,** ಪರಿಸರ ಅಧಿಕಾರಿ ಚಿಕ್ಕಬಳ್ಳಾಪುರ

ರ್‍ಯಾಕ್ಸ್ ಕಾರ್ಖಾನೆಯವರು ರಾಸಾಯನಿಕ ತ್ಯಾಜ್ಯವನ್ನು ಬಯಲು ಪ್ರದೇಶಕ್ಕೆ ಬಿಡುತ್ತಿರುವ ಬಗ್ಗೆ ದೂರು ಬಂದಿದೆ, ತಕ್ಷಣ ಸ್ಥಳ ಪರಿಶೀಲನೆ ಮಾಡಿ ರಾಸಾಯನಿಕ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡದೆ, ಖಾಲಿ ಜಾಗದಲ್ಲಿ ಬಿಡುವುದು ಕಂಡು ಬಂದರೆ ಕಾರ್ಖಾನೆ ವಿರುದ್ಧ ತಕ್ಷಣ ಕಾನೂನುಕ್ರಮ ಕೈಗೊಳ್ಳಲಾಗುವುದು.

• **ಅರವಿಂದ್ ಕೆ.ಎಂ.,** ತಹಸೀಲ್ದಾರ್.

ಬಡವರ ಹೊಟ್ಟೆ ಮೇಲೆ ಹೊಡೆಯುವ ಕೆಲಸ: ಸಂಪಂಗಿ

• **ಕನ್ನಡಪ್ರಭ ವಾರ್ತೆ** ಕೆಜಿಎಫ್

ತಾಲೂಕಿನಲ್ಲಿ ಸರ್ಕಾರ 13.500 ವೃದ್ಧಾಪ್ಯ ವೇತನ, 4 ಸಾವಿರ ರೇಷನ್ ಕಾರ್ಡ್‌ಗಳನ್ನು ರದ್ದು ಮಾಡುವ ಮೂಲಕ ಬಡವರ ಹೊಟ್ಟೆ ಮೇಲೆ ಹೊಡೆಯುವ ಕೆಲಸವನ್ನು ಕ್ಷೇತ್ರದ ಶಾಸಕಿ ರೂಪಕಲಾ ಶಶಿಧರ್ ಮಾಡುತ್ತಿದ್ದಾರೆ ಎಂದು ಮಾಜಿ ಶಾಸಕ ವೈ.ಸಂಪಂಗಿ ಆರೋಪಿಸಿದರು.

ಕ್ಷೇತ್ರದಲ್ಲಿ ನಡೆಯುತ್ತಿರುವ ಎಸ್‌ಐಆರ್‌ಪ್ರಗತಿಯನ್ನು ಪರಿಶೀಲನೆ ನಡೆಸುವ ನಿಟ್ಟಿನಲ್ಲಿ ಬಿಎಲ್‌ಎಗಳೊಂದಿಗೆ ನಗರಸಭೆ ವ್ಯಾಪ್ತಿಯ ಆಂಡ್ರಸನ್ ಪೇಟೆ, ರಾಬರ್ಟ್ಸನ್‌ಪೇಟೆ ಎನ್.ಟಿ.ಬ್ಲಾಕ್ ಪ್ರಾಂಕ್ ಅಂಡ್ ಕೋ ಬಡಾವಣೆಗಳಿಗೆ ಭೇಟಿ ನೀಡಿ ಎಸ್‌ಐಆರ್‌ಅರ್ಜಿಗಳನ್ನು ಭರ್ತಿ ಮಾಡಿ ಬಿಎಲ್‌ಒಗಳಿಗೆ ನೀಡಿ ಮಾತನಾಡಿದರು. ಕಾಂಗ್ರೆಸ್ ಸರ್ಕಾರ ಗ್ಯಾರಂಟಿಗಳ ಮೂಲಕ ಅಧಿಕಾರಕ್ಕೆ ಬಂದು ಬಡವರ ಅನ್ನವನ್ನು ಕಿತ್ತುಕೊಂಡು ಬಡವರ ಹೊಟ್ಟೆ ಮೇಲೆ ಹೊಡೆದಿದೆ ಎಂದರು.

ಗ್ಯಾರಂಟಿಗಳನ್ನು ಕೇಳಿದವರು ಯಾರು: ಬಡವರು ನಿಮ್ಮ ಬಳಿ ಬಂದು 5 ಗ್ಯಾರಂಟಿಗಳನ್ನು ಕೇಳಿದರೆ? ನೀವೇ 5 ಗ್ಯಾರಂಟಿಗಳನ್ನು ನೀಡಿ ಇದೀಗ ಎಲ್ಲದಕ್ಕೂ ಬಡವರ ಸೌಲಭ್ಯಗಳಿಗೆ ಕತ್ತರಿ ಹಾಕುತ್ತಿದ್ದು, ಶಾಸಕರ ತಂದೆ ಕೆ.ಎಚ್.ಮುನಿಯಪ್ಪ ಸರ್ಕಾರದಲ್ಲಿ ಪ್ರಭಾವಿ ಮಂತ್ರಿಯಾಗಿದ್ದು ಬಡವರಿಗೆ ನೀಡುವ ಸೌಲತ್ತುಗಳನ್ನು ಸರಿಪಡಿಸಬೇಕು ಎಂದರು.

ನಮ್ಮ ಗ್ರಾಮದ ಕಡೆ ಶಾಸಕರು ಬಂದೇ ಇಲ್ಲ, ನಮ್ಮ ಗ್ರಾಮದಲ್ಲಿ ಪ್ರಮುಖವಾಗಿ ಕುಡಿವ ನೀರಿನ ಸಮಸ್ಯೆ ಇದ್ದು, ಕುಡಿವ ಒಂದು ಬಿಂದಿಗೆ ನೀರಿಗೆ 5 ರು. ಕೊಟ್ಟು ಪಡೆಯುತ್ತಿದ್ದೇವೆಂದು ಮಾಜಿ ಶಾಸಕ ಸಂಪಂಗಿ ಮುಂದೆ ಗೋಡಮಾಕನಹಳ್ಳಿ ಗ್ರಾಮದ ನಿವಾಸಿಯಾದ ಗೋವಿಂದಪ್ಪ ತಮ್ಮ ಅಳಲನ್ನು ತೋಡಿಕೊಂಡರು. ನೀವು ಹಿಂದೆ ಶಾಸಕರಾಗಿದ್ದ ಸಂದರ್ಭದಲ್ಲಿ ಯಾವುದೇ ಸಮಸ್ಯೆ ಇರಲಿಲ್ಲ ಆದರೆ ಇದೀಗ ಸುಖಾಸುಮ್ಮನೆ ಬಡವರು ತಾಲ್ಲೂಕು ಕಚೇರಿಗೆ ನಿತ್ಯ ಅಲೆದಾಟ ನಡೆಸಬೇಕಾದ ಪರಿಸ್ಥಿತಿ ಬಂದಿರುವುದಾಗಿ ತಿಳಿಸಿದರು.

60 ಎಕರೆ ಸರ್ಕಾರಿ ಜಮೀನು ಗುಳುಂ: ಕಳೆದ ವಾರ ದಾಖಲೆಗಳ ಸಹಿತವಾಗಿ ಕೆಜಿ.ಕೋಟೆ ಬಳಿಯಿರುವ ಅರಣ್ಯ ಪ್ರದೇಶದಲ್ಲಿರುವ 60 ಎಕರೆ ಸರ್ಕಾರಿ ಜಮೀನು ಮಂಜೂರು ಮಾಡುವ ಹುನ್ನಾರ ನಡೆಸಲಾಗುತ್ತಿದೆ ಎಂದು ದಾಖಲೆ ಸಹಿತವಾಗಿ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದ್ದೇ ಆದರೆ ಶಾಸಕರು ಇದುವರೆಗು ಉತ್ತರವನ್ನೇ ನೀಡಿಲ್ಲ ಎಂದರು.

ಕ್ಷೇತ್ರದಲ್ಲಿನ ಬಡ ಕುಟುಂಬಗಳು ಅನುಭವಿಸುತ್ತಿರುವ ಕಷ್ಟಗಳ ಪರಿಹಾರಕ್ಕಾಗಿ ನಾನು ತಾಲೂಕು ಕಚೇರಿ ಮುಂದೆ ಧರಣಿ ನಡೆಸುತ್ತೇನೆ. ಕ್ಷೇತ್ರದ ಮತದಾರರು ಧರಣಿಯಲ್ಲಿ ಭಾಗವಹಿಸಿ ಸಮಸ್ಯೆ ಬಗೆಹರಿಯುವವರೆಗೂ ನಾನು ಪ್ರತಿಭಟನೆಯಿಂದ ಹಿಂದೆ ಸರಿಯುವುದಿಲ್ಲ ಎಂದು ತಿಳಿಸಿದರು.

ಕೆಎಸ್‌ಒಯುನಿಂದ ಕೆಪಿಎಸ್ಸಿ, ಕೆಇಎ ಪರೀಕ್ಷೆಗಳಿಗೆ ತರಬೇತಿ

ಕೋಲಾರ: ಸರ್ಕಾರವು ಕರ್ನಾಟಕ ಲೋಕ ಸೇವಾ ಆಯೋಗ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಡೆಸಲಿರುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ 50 ದಿನಗಳ ತರಬೇತಿಯನ್ನು ಮೈಸೂರಿನ ಕೇಂದ್ರ ಕಚೇರಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ. ಆಸಕ್ತರು ಜು.21 ರೊಳಗಾಗಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4.30 ಗಂಟೆಯಿಂದತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು 0821-2515944 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದು.

ಗ್ರೋ

ಬಿಲಿಯನ್‌ಬ್ರೇನ್ಸ್ ಗ್ಯಾರೇಜ್ ವೆಂಚರ್ಸ್ ಲಿಮಿಟೆಡ್

(ಹಿಂದೆ ಬಿಲಿಯನ್‌ಬ್ರೇನ್ಸ್ ಗ್ಯಾರೇಜ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ಲೆಕ್ಕಪರಿಶೋಧನೆಗೊಳಪಡದ ಹಣಕಾಸು ಫಲಿತಾಂಶಗಳು

ಜೂನ್ 30, 2026ಕ್ಕೆ ಅಂತ್ಯಗೊಂಡ ತ್ರೈಮಾಸಿಕದ ಹಣಕಾಸು ಫಲಿತಾಂಶಗಳು

ಕಂಪನಿಯ ನಿರ್ದೇಶಕರ ಮಂಡಳಿಯು 2026ರ ಜುಲೈ 15ರಂದು ನಡೆದ ಸಭೆಯಲ್ಲಿ, ಜೂನ್ 30, 2026ಕ್ಕೆ ಅಂತ್ಯಗೊಂಡ ತ್ರೈಮಾಸಿಕದ ಲೆಕ್ಕಪರಿಶೋಧನೆಗೊಳಪಡದ ಸ್ವತಂತ್ರ ಹಾಗೂ ಏಕೀಕೃತ ಹಣಕಾಸು ಫಲಿತಾಂಶಗಳನ್ನು ಅನುಮೋದಿಸಿದೆ.

ಈ ಹಣಕಾಸು ಫಲಿತಾಂಶಗಳು ಹಾಗೂ ಸೀಮಿತ ಪರಿಶೀಲನಾ ವರದಿಯನ್ನು ಕೆಳಗೆ ನೀಡಿರುವ QR ಸಂಕೇತವನ್ನು ಸ್ಕ್ಯಾನ್ ಮಾಡುವ ಮೂಲಕ ಅಥವಾ ಈ ಜಾಲತಾಣದ ವಿಳಾಸಕ್ಕೆ ಭೇಟಿ ನೀಡಿ ವೀಕ್ಷಿಸಬಹುದು:

https://groww.in/investor-relations/performance/quarterly-results

ಬಿಲಿಯನ್‌ಬ್ರೇನ್ಸ್ ಗ್ಯಾರೇಜ್ ವೆಂಚರ್ಸ್ ಲಿಮಿಟೆಡ್‌ನ ನಿರ್ದೇಶಕರ ಮಂಡಳಿಯ ಪರವಾಗಿ ಮತ್ತು ಹೆಸರಿನಲ್ಲಿ

ಸ್ಥಳ: ಬೆಂಗಳೂರು
ದಿನಾಂಕ: ಜುಲೈ 15, 2026

ಸಹಿ/-
ಇಶಾನ್ ಬನ್ಸಾಲ್
ಪೂರ್ಣ ಸಮಯದ ನಿರ್ದೇಶಕರು ಮತ್ತು ಸಿಎಫ್ಒ
ಡಿಐಎನ್: 06538822

SEBI (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015 ರ ನಿಯಮ 33 ಮತ್ತು ನಿಯಮ 47(1) ರ ಅಡಿಯಲ್ಲಿ ಹೊರಡಿಸಲಾಗಿದೆ.

ನೋಂದಾಯಿತ ಮತ್ತು ಕಾರ್ಪೊರೇಟ್ ಕಚೇರಿ: ವೈಷ್ಣವಿ ಟೆಕ್ ಪಾರ್ಕ್, ಸೌತ್ ಟವರ್ 3ನೇ ಮಹಡಿ, ಸರ್ವೆ ಸಂಖ್ಯೆ. 16/1 & 17/2, ಅಂಬಲೀಪುರ ಗ್ರಾಮ, ವರ್ತೂರು ಹೋಬಳಿ, ಬೆಳ್ಳಂದೂರು, ಬೆಂಗಳೂರು, ಕರ್ನಾಟಕ, ಭಾರತ, 560103 | ದೂರವಾಣಿ: 080-69601300 | ಇಮೇಲ್: corp.secretarial@groww.in | ವೆಬ್‌ಸೈಟ್: www.groww.in | ಕಾರ್ಪೊರೇಟ್ ಗುರುತಿನ ಸಂಖ್ಯೆ: L72900KA2018PLC109343

ಭಾರತ ಸರ್ಕಾರ
ಸಾಲ ವಸೂಲಾತಿ ನ್ಯಾಯಮಂಡಳಿ-II
ಬೆಂಗಳೂರು, ಕರ್ನಾಟಕ
4ನೇ ಮಹಡಿ, ಬಿಎಸ್‌ಎನ್‌ಎಲ್ ಕಟ್ಟಡ, ಟೆಲಿಫೋನ್ ಹೌಸ್, ರಾಜಭವನ್ ರಸ್ತೆ, ಬೆಂಗಳೂರು-560001

ಮಾರಾಟ ಘೋಷಣೆ ಹಾಗೂ ಇ-ಹರಾಜು ಮಾರಾಟ ಪ್ರಕಟಣೆ

(ಆದಾಯ ತೆರಿಗೆ ಕಾಯ್ದೆ, 1961ರ ಎರಡನೇ ಅನುಸೂಚಿಯ ನಿಯಮ 52(2) ರಡಿಯಲ್ಲಿ ಹಾಗೂ ಸಾಲಗಳ ವಸೂಲಿ ಮತ್ತು ದಿವಾಳಿತನ ಕಾಯ್ದೆ, 1993ರೊಂದಿಗೆ ಓದಿಕೊಂಡು ಹೊರಡಿಸಲಾಗಿದೆ)

T.R.C No: 1123/2017 IN O.A No 241/2010

ನಡುವೆ:

ಬ್ಯಾಂಕ್ ಆಫ್ ಬರೋಡಾ, (ಹಿಂದಿನ ವಿಜಯಾ ಬ್ಯಾಂಕ್) ದೇವರಾಯಸಮುದ್ರ ಶಾಖೆ. ....ಪ್ರಮಾಣಪತ್ರ ಹೊಂದಿರುವ ಬ್ಯಾಂಕ್ (CHB)

ವಿರುದ್ಧ

ಶ್ರೀ ಕೆ.ಎ. ಬದರಿನಾರಾಯಣ ಮತ್ತು ಇತರರು ....ಪ್ರಮಾಣೀಕೃತ ಸಾಲಗಾರರು (CDs).

ಗೆ:

1. ಶ್ರೀ ಕೆ ಎ ಬದರಿನಾರಾಯಣ ಬಿನ್ ಕೆ ವಿ ಅನಂತಪದ್ಮನಾಬಯ್ಯ ನಿವಾಸ: ತಿಪ್ಪದೊಡ್ಡಿ ಗ್ರಾಮ ಬೈರಕೂರು ಹೋಬಳಿ, ಮುಳಬಾಗಲು ತಾಲೂಕು, ಕೋಲಾರ ಜಿಲ್ಲೆ
2. ಶ್ರೀ ಕೆ ವಿ ಅನಂತಪದ್ಮನಾಬಯ್ಯ ಬಿನ್ ವೆಂಕಟಸುಬ್ಬಯ್ಯ ನಿವಾಸ: ತಿಪ್ಪದೊಡ್ಡಿ ಗ್ರಾಮ ಬೈರಕೂರು ಹೋಬಳಿ, ಮುಳಬಾಗಲು ತಾಲೂಕು, ಕೋಲಾರ ಜಿಲ್ಲೆ
3. ಶ್ರೀಮತಿ ಶೈಲಜಾ ಕೋಂ ಬದರಿನಾರಾಯಣ ನಿವಾಸ: ತಿಪ್ಪದೊಡ್ಡಿ ಗ್ರಾಮ ಬೈರಕೂರು ಹೋಬಳಿ, ಮುಳಬಾಗಲು ತಾಲೂಕು, ಕೋಲಾರ ಜಿಲ್ಲೆ

.........ಪ್ರಮಾಣೀಕೃತ ಸಾಲಗಾರರು (Cds)

ಮಾನ್ಯ ಪ್ರಧಾನ ಅಧಿಕಾರಿ, ಸಾಲ ವಸೂಲಾತಿ ನ್ಯಾಯಾಧೀಕರಣ, ಬೆಂಗಳೂರು ಇವರು ಬಾಕಿ ಮತ್ತು ದಿವಾಳಿತನ ವಸೂಲಾತಿ ಕಾಯ್ದೆ, 1993 ರ (ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ) ಸೆಕ್ಷನ್ 19(22) ರ ಅಡಿಯಲ್ಲಿ ಒ.ಎ ನಂ.: 241/2010ರ ಬ್ಯಾಂಕ್ ಆಫ್ ಬೊರೋಡಾ (ಹಿಂದಿನ ವಿಜಯ ಬ್ಯಾಂಕ್) ದೇವರಾಯಸಮುದ್ರ ಶಾಖೆ [CHB] ವಿರುದ್ಧ ಶ್ರೀ ಕೆ ಎ ಬದರಿನಾರಾಯಣ ಮತ್ತು ಇತರರು ವಿರುದ್ಧ ಸಾಲ ವಸೂಲಾತಿಗಾಗಿ ಪ್ರಮಾಣಪತ್ರವನ್ನು ನೀಡಲಾಗಿದೆ, ಇದನ್ನು ಕೆಳಗೆ ಸಹಿ ಮಾಡಿದವರಿಗೆ ಮುಂದಿನ ಪ್ರಕ್ರಿಯೆಗಾಗಿ ಜಾರಿಮಾಡಲಾಗಿದೆ.

2. ಕೆಳಗೆ ಸಹಿ ಮಾಡಿದ ಪ್ರಾಧಿಕಾರವು ಟಿ ಆರ್ ಸಿ ನಂ. 1123/2017 ರಲ್ಲಿ ಜಾರಿ ಪ್ರಕ್ರಿಯೆಗಳನ್ನು ಪ್ರಾರಂಭಿಸಿದ್ದು ಒ ಎ ಸಲ್ಲಿಸಿದ ದಿನಾಂಕದಿಂದ ಅಂತಿಮ ದಿನಾಂಕದವರೆಗೆ ಪ್ರಮಾಣೀಕೃತ ಸಾಲಗಾರರಿಂದ 16,82,154/- (ರೂಪಾಯಿಗಳು ಹದಿನಾರು ಲಕ್ಷ ಎಂಬತ್ತೆರಡು ಸಾವಿರದ ನೂರ ಐವತ್ತನಾಲ್ಕು ಮಾತ್ರ) ವಸೂಲಾತಿಗಾಗಿ ಕ್ರಮ ಜರುಗಿಸಬಹುದಾಗಿದೆ.

3. ಈಗಾಗಲೇ ಪ್ರಮಾಣಪತ್ರ ಹೊಂದಿರುವ ಬ್ಯಾಂಕ್, ಸಲ್ಲಿಸಿರುವ ಅಫಿಡವಿಟ್ ಪ್ರಕಾರ ಪ್ರಮಾಣೀಕೃತ ಸಾಲಗಾರರಿಂದ ದಿನಾಂಕ: 08.06.2026 ರವರೆಗೆ ಬಾಕಿಯಿರುವ ಮೊತ್ತ ರೂ. 1,21,27,610/- (ಒಂದು ಕೋಟಿ ಇಪ್ಪತ್ತೊಂದು ಲಕ್ಷ ಇಪ್ಪತ್ತೇಳು ಸಾವಿರದ ಆರುನೂರ ಹತ್ತು ರೂಪಾಯಿಗಳು ಮಾತ್ರ) ಆರ್‌ಸಿ ಪ್ರಕಾರ ಮರುಪಾವತಿಯಾಗುವವರೆಗೆ ಪಾವತಿಸಬೇಕಾದ ಹೆಚ್ಚಿನ ಬಡ್ಡಿಯೊಂದಿಗೆ. ದಿನಾಂಕ: 09.06.2026 ರಿಂದ ವೆಚ್ಚಗಳು ಮತ್ತು ಬಡ್ಡಿಯನ್ನು ಹೊರತುಪಡಿಸಿ ಮೊತ್ತವನ್ನು ಮರುಪಾವತಿ ಪ್ರಕ್ರಿಯೆಯಲ್ಲಿ ಉಂಟಾದ/ತಗಲುವ ವೆಚ್ಚಗಳು ಸೇರಿದಂತೆ.

ಕೆಳಗೆ ನಮೂದಿಸಿರುವ ಆಸ್ತಿಯನ್ನು ವೆಬ್‌ಸೈಟ್: http://drt.auctiontiger.net ಆನ್‌ಲೈನ್ ಇ-ಹರಾಜು ಮೂಲಕ ದಿನಾಂಕ:27.03.2026ರಂದು ಮಾರಾಟ ಮಾಡಲಾಗುತ್ತದೆ. ಪ್ರಮಾಣಪತ್ರ ಸಾಲಗಾರರಿಂದ ಬ್ಯಾಂಕಿಗೆ ರೂ.3,43,49,657/- (ಮೂರು ಕೋಟಿ ನಲವತ್ತಮೂರು ಲಕ್ಷದ ನಲವತ್ತೊಂಬತ್ತು ಸಾವಿರದ ಆರುನೂರ ಐವತ್ತೇಳು ರೂಪಾಯಿಗಳು ಮಾತ್ರ) ಜೊತೆಗೆ ವೆಚ್ಚಗಳು, ಖರ್ಚುಗಳು ವಸೂಲಾತಿ ಪ್ರಮಾಣಪತ್ರದಲ್ಲಿ ವಿವರಿಸಿದಂತೆ ಒಎ ಸಲ್ಲಿಸಿದ ದಿನಾಂಕದಿಂದ ಸಂಪೂರ್ಣ ಹಣ ಮರುಪಾವತಿವರೆಗೆ ವಸೂಲಿ ಮಾಡಲು ಮಾರಾಟಕ್ಕೆ ಕ್ರಮ ಕೈಗೆತ್ತಿಕೊಂಡಿದೆ.

4. ಕೆಳಗೆ ಸಹಿ ಮಾಡಿದ ಪ್ರಾಧಿಕಾರವು ಪ್ರಮಾಣೀಕೃತ ಸಾಲಗಾರರು ಅಡಮಾನವಿರಿಸಿರುವ ಆಸ್ತಿಯನ್ನು ಸೇವಾ ಪೂರೈಕೆದಾರರ ವೆಬ್‌ಸೈಟ್ "ಆನ್‌ಲೈನ್ ಇ-ಹರಾಜು ಮಾರಾಟ" ಮೂಲಕ ಮಾರಾಟ ಮಾಡಲು ಅನುಮತಿ ನೀಡಿರುತ್ತಾರೆ. ಹರಾಜಿನ ದಿನಾಂಕ, ಬಿಡ್ ಫಾರ್ಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ, ಮೀಸಲು ಬೆಲೆ, ಇಎಂಡಿ ಠೇವಣಿ, ಬಿಡ್ ಹೆಚ್ಚಳ ಮೊತ್ತ ಮತ್ತು ಹರಾಜಿನ ಸಮಯದ ವಿವರಗಳನ್ನು ಕೆಳಕಂಡಂತೆ ಉಲ್ಲೇಖಿಸಲಾಗಿದೆ:

ಆರ್‌ಸಿ ಪ್ರಕಾರ ಆಸ್ತಿಯ ವಿವರಗಳು	ಮೀಸಲು ಬೆಲೆ	ಅರ್ನೆಸ್ಟ್ ಮನಿ ಠೇವಣಿ ಮತ್ತು ಸಮಯದೊಂದಿಗೆ ದಿನಾಂಕ	ಬಿಡ್ ಹೆಚ್ಚಳ ಮೊತ್ತ	ಹರಾಜಿನ ದಿನಾಂಕ ಮತ್ತು ಸಮಯ
ಸ್ಥಿರಾಸ್ತಿ ವಿವರ	ರೂ. 80,00,000/- (ಎಂಬತ್ತು ಲಕ್ಷ ರೂಪಾಯಿಗಳು ಮಾತ್ರ)	ರೂ. 8,00,000/- (ಎಂಟು ಲಕ್ಷ ರೂಪಾಯಿಗಳು ಮಾತ್ರ) 11.08.2026 ಸಂಜೆ 4:00	ರೂ. 5,00,000/- (ರೂಪಾಯಿ ಐದು ಲಕ್ಷ ಮಾತ್ರ)	17.08.2026 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ

*ಹರಾಜಿನ ಸಮಯವು ಪ್ರತಿ 5 ನಿಮಿಷಗಳ ಸ್ವಯಂ ವಿಸ್ತರಣಾ ನಿಯಮವನ್ನು ಹೊಂದಿರುತ್ತದೆ. ಹರಾಜು ಮುಕ್ತಾಯವಾಗುವ ಮುನ್ನ ಯಾವುದೇ ಬಿಡ್ (ಬೆಲೆ ಕೂಗುವಿಕೆ) ಸಲ್ಲಿಕೆಯಾದರೆ, ಈ ಹರಾಜು ಮುಕ್ತಾಯದ ಸಮಯವು ತಲಾ 5 ನಿಮಿಷಗಳಂತೆ ವಿಸ್ತರಿಸಲ್ಪಡುತ್ತದೆ. ಬಿಡ್ ಹೆಚ್ಚಳ ಮೊತ್ತ ಕನಿಷ್ಠ ರೂ.5,00,000/- (ಐದು ಲಕ್ಷ ರೂಪಾಯಿಗಳು ಮಾತ್ರ) ಬಿಡ್ ಮೊತ್ತದ ಕುರಿತಾಗಿ ಅಥವಾ ಬಿಡ್‌ದಾರರ ನಡುವೆ ಯಾವುದೇ ವಿವಾದ ಉಂಟಾದಲ್ಲಿ, ಆ ನಿರ್ದಿಷ್ಟ ಹರಾಜನ್ನು ತಕ್ಷಣವೇ ಮತ್ತೊಮ್ಮೆ ಹರಾಜಿಗೆ ಇಡಲಾಗುವುದು.

5. ಸಾರ್ವಜನಿಕರು ಆನ್‌ಲೈನ್ ಇ-ಹರಾಜು ಪ್ರಕ್ರಿಯೆಯಲ್ಲಿ M/s PSB Alliance Pvt Ltd ನ baanknet.com ವೆಬ್‌ಸೈಟ್- ಮೂಲಕ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ BAANKNET ನ ಸಹಾಯವಾಣಿ ಸಂಖ್ಯೆ: 8291220220 ರಲ್ಲಿ ಸಂಪರ್ಕಿಸಬಹುದು.

6. ಆಸಕ್ತ ಬಿಡ್‌ದಾರರು, ಇ-ಹರಾಜು ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ಸೇವಾ ಪೂರೈಕೆದಾರರಾದ M/s PSB Alliance Pvt Ltd ಅನ್ನು ಅವರ ಇ-ಮೇಲ್ ಐಡಿ: support.baanknet@psballiance.com ಮತ್ತು ವೆಬ್‌ಸೈಟ್: https://baanknet.com (ವಿವರಗಳನ್ನು ಮೇಲೆ ನೀಡಲಾಗಿದೆ) ಮೂಲಕ ಸಂಪರ್ಕಿಸಲು ಕೋರಲಾಗಿದೆ. ಅಲ್ಲದೆ, ಬಿಡ್ ಫಾರ್ಮ್‌ಗಳನ್ನು ಸಲ್ಲಿಸಲು ಮತ್ತು ಇ-ಹರಾಜು ಮಾರಾಟ ಪ್ರಕ್ರಿಯೆಯಲ್ಲಿ ಭಾಗವಹಿಸಲು; ಆನ್‌ಲೈನ್ ನೋಂದಣಿ, ಬಳಕೆದಾರ ಐಡಿ (user ID), ಪಾಸ್‌ವರ್ಡ್, ಸಹಾಯ, ಕಾರ್ಯವಿಧಾನದ ಮಾಹಿತಿ, ಇ-ಹರಾಜಿನ ಕುರಿತಾದ ಆನ್‌ಲೈನ್ ತರಬೇತಿ ಇತ್ಯಾದಿಗಳಿಗಾಗಿ ಇ-ಹರಾಜು ಸೇವಾ ಪೂರೈಕೆದಾರರನ್ನು ಸಂಪರ್ಕಿಸುವುದು ಅಗತ್ಯವಾಗಿದೆ.

7. ಆಸಕ್ತ ಬಿಡ್‌ದಾರರು https://baanknet.com/ ವೆಬ್‌ಸೈಟ್‌ಗೆ ಭೇಟಿ ನೀಡಿ, ಇ-ಹರಾಜು ವೇದಿಕೆಯಲ್ಲಿ ತಮ್ಮ ಪ್ಯಾನ್ ಕಾರ್ಡ್ ಮತ್ತು ಇತ್ತೀಚಿನ ಮೊಬೈಲ್ ಸಂಖ್ಯೆಯೊಂದಿಗೆ ಜೋಡಣೆಯಾಗಿರುವ ಆಧಾರ್ ಕಾರ್ಡ್‌ನಂತಹ ಮಾನ್ಯವಾದ ಕೆವೈಸಿ ದಾಖಲೆಗಳ ಜೊತೆಗೆ, ಮತ್ತು ಡಿಜಿ ಲಾಕರ್‌ನಲ್ಲಿ ಕಡ್ಡಾಯವಾಗಿ ನೋಂದಾಯಿಸಲ್ಪಟ್ಟಿರಬೇಕು. Baanknet.com ಪೋರ್ಟಲ್ (M/s PSB Alliance Pvt. Ltd.) ಮೂಲಕ ನಡೆಯುವ ಈ ಇ-ಹರಾಜಿನಲ್ಲಿ ಭಾಗವಹಿಸಲು, ನೀವು Baanknet ನ ಸಹಾಯವಾಣಿ (ಸಂಪರ್ಕ ಸಂಖ್ಯೆ: 8291220220) ಅಥವಾ ಇಮೇಲ್ ಐಡಿ support.baanknet@psballiance.com ಮೂಲಕ ಸಂಪರ್ಕಿಸಬಹುದು.

8. ಭಾಗವಹಿಸಲು ಇಚ್ಛಿಸುವ ಆಸಕ್ತ ಬಿಡ್‌ದಾರರು ನಿಗದಿತ ಮೀಸಲು ಬೆಲೆಯ 10% ರಷ್ಟು ಮೊತ್ತವನ್ನು ಇಎಂಡಿ ಆಗಿ ಪಾವತಿಸಬೇಕು. ಈ ಮೊತ್ತವನ್ನು M/s. PSB Alliance Private Limited (BAANKNET) ಪೋರ್ಟಲ್‌ನ ಇ-ವ್ಯಾಲೆಟ್‌ನಲ್ಲಿ ನೇರವಾಗಿ ಪಾವತಿಸಬಹುದು ಅಥವಾ ಅಲ್ಲಿ ಚಲನ್ ರಶೀದಿಯನ್ನು ಪಡೆದು, ಅದರಲ್ಲಿ ನಮೂದಿಸಲಾದ ಖಾತೆಯ ವಿವರಗಳಿಗೆ RTGS/NEFT ಮೂಲಕ **11.08.2026 ರಂದು ಸಂಜೆ 4:00 ಗಂಟೆಯೊಳಗೆ ಪಾವತಿಸಬಹುದು. 11.08.2026 ರಂದು ಸಂಜೆ 4:00 ಗಂಟೆಯ ನಂತರ ಸ್ವೀಕರಿಸಲಾದ/ಠೇವಣಿ ಮಾಡಲಾದ ಇಎಂಡಿ ಅಥವಾ ಇ-ಹರಾಜು ಸೇವಾ ಪೂರೈಕೆದಾರರ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಬಿಡ್ ಫಾರ್ಮ್‌ಗಳನ್ನು ಪರಿಗಣಿಸಲಾಗುವುದಿಲ್ಲ.** ಅಂಚೆ ವಿಳಂಬಗಳಿಗೆ ಅವಕಾಶವಿರುವುದಿಲ್ಲ. ಒಂದಕ್ಕಿಂತ ಹೆಚ್ಚು ಆಸ್ತಿಗಳಿದ್ದಲ್ಲಿ, ಪ್ರತಿ ಆಸ್ತಿಗೂ ಪ್ರತ್ಯೇಕ ಬಿಡ್ ಫಾರ್ಮ್‌ಗಳನ್ನು ಇಎಂಡಿ ಪಾವತಿಯ ಪುರಾವೆಯೊಂದಿಗೆ ಸಲ್ಲಿಸಬೇಕು. ಇಎಂಡಿ ಮತ್ತು ಮಾರಾಟದ ಮೊತ್ತದ ಪಾವತಿಯು ಬಿಡ್‌ದಾರರ ಸ್ವಂತ ಖಾತೆಯ ಮೂಲಕವೇ ನಡೆಯಬೇಕು.

9. ಭರ್ತಿ ಮಾಡಿದ ಬಿಡ್ ನಮೂನೆಯ ಮುದ್ರಿತ ಪ್ರತಿಗಳನ್ನು ಮತ್ತು ಮೇಲಿನ ದಾಖಲೆಗಳ ಸ್ವಯಂ-ದೃಢೀಕೃತ ಪ್ರತಿಗಳನ್ನು, ಕೆಳಗೆ ಸಹಿ ಮಾಡಿದವರಿಗೆ ಖುದ್ದಾಗಿ ಹಸ್ತಾಂತರಿಸಿ/ನೋಂದಾಯಿತ/ಸ್ಪೀಡ್ ಪೋಸ್ಟ್/ಕೊರಿಯರ್ ಮೂಲಕ ದಿನಾಂಕ 14.08.2026 ರಂದು ಸಂಜೆ 4.00 ಗಂಟೆಯೊಳಗೆ ತಲುಪುವಂತೆ ಸಲ್ಲಿಸಬೇಕು. ಇಎಂಡಿ ಮೊತ್ತ ಮತ್ತು ನಂತರದ ಮಾರಾಟ ವಹಿವಾಟುಗಳ ಮೊತ್ತವನ್ನು ಬಿಡ್ಡಾರರು/ಅವರ ಖಾತೆಯ ಮೂಲಕ ಮಾತ್ರ ರವಾನಿಸಬೇಕು. ಇಎಂಡಿ ಸ್ವೀಕರಿಸಿದ/ಠೇವಣಿ ಮಾಡಿದ ಮತ್ತು ಬಿಡ್ ನಮೂನೆಗಳನ್ನು ಇ-ಹರಾಜು ಸೇವಾ ಪೂರೈಕೆದಾರರ ಪೋರ್ಟಲ್‌ನಲ್ಲಿ 11.08.2026 ರಂದು ಸಂಜೆ 4.00 ಗಂಟೆಯ ನಂತರ ಅಪ್‌ಲೋಡ್ ಮಾಡಿದ ಇಎಂಡಿಯನ್ನು ಪರಿಗಣಿಸಲಾಗುವುದಿಲ್ಲ. ಅಂಚೆ ವಿಳಂಬಗಳಿಗೆ ಅವಕಾಶವಿಲ್ಲ. ಹೆಚ್ಚಿನ ವಸ್ತುಗಳು ಇದ್ದರೆ, ಪ್ರತಿ ಆಸ್ತಿಗೆ ಇಎಂಡಿ ಠೇವಣಿ ಪುರಾವೆಯೊಂದಿಗೆ ಪ್ರತ್ಯೇಕ ಬಿಡ್ ನಮೂನೆಗಳನ್ನು ಸಲ್ಲಿಸಬೇಕು.

10. ಸಾರ್ವಜನಿಕ ಮಾರಾಟ ಸೂಚನೆ/ಟೆಂಡರ್ ದಾಖಲೆಯಲ್ಲಿ ನಿರ್ದಿಷ್ಟಪಡಿಸಿದಂತೆ ಇಎಂಡಿ ಮೊತ್ತದೊಂದಿಗೆ ಬಿಡ್/ಗಳನ್ನು ಸಲ್ಲಿಸಬೇಕು. ಮಾರಾಟ ಸೂಚನೆ/ಟೆಂಡರ್ ದಾಖಲೆಯಲ್ಲಿ ನಿರ್ದಿಷ್ಟಪಡಿಸಿದಂತೆ baanknet.com ನಲ್ಲಿ ಲಭ್ಯವಿರುವ ಇ-ವ್ಯಾಲೆಟ್ ಮೂಲಕ ಇಎಂಡಿ ಮೊತ್ತವನ್ನು ರವಾನಿಸಲಾಗುತ್ತದೆ

11. ಬಿಡ್ಡರ್‌ಗಳು ತಮ್ಮ ಗೌಪ್ಯತೆಯನ್ನು ಕಾಪಾಡಲು ಯಾರಿಗೂ ಇಎಂಡಿ, ಯುಟಿಆರ್ ಕೋಡ್ ಇತ್ಯಾದಿಗಳ ರವಾನೆ ವಿವರಗಳನ್ನು ಬಹಿರಂಗಪಡಿಸಬಾರದು. ಇಎಂಡಿ ಇಲ್ಲದ ಬಿಡ್ ಫಾರ್ಮ್ ಅನ್ನು ತಿರಸ್ಕರಿಸಲಾಗುತ್ತದೆ. ಇಎಂಡಿ ರವಾನೆಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಬಿಡ್ ಫಾರ್ಮ್‌ನಲ್ಲಿ ನಮೂದಿಸಬೇಕು. ಇಎಂಡಿ ಭಾಗಶಃ ಅಥವಾ ಪೂರ್ಣವಾಗಿ, ತಪ್ಪಿದಲ್ಲಿ ಮುಟ್ಟುಗೋಲಿಗೆ ಒಳಗಾಗುತ್ತದೆ.

12. ಇಎಂಡಿ ಮೊತ್ತದ ಠೇವಣಿ ಮತ್ತು ಬಿಡ್‌ಗಳ ಆನ್‌ಲೈನ್ ಸಲ್ಲಿಕೆಯನ್ನು 11.08.2026 ರಂದು ಸಂಜೆ 4.00 ಗಂಟೆಯೊಳಗೆ ಪೂರ್ಣಗೊಳಿಸಬೇಕು. ನಂತರ ಸ್ವೀಕರಿಸಿದ ಇಎಂಡಿ/ಗಳು ಮತ್ತು ಬಿಡ್/ಗಳನ್ನು ಪರಿಗಣಿಸಲಾಗುವುದಿಲ್ಲ. ಯಶಸ್ವಿ ಬಿಡ್ಡರ್‌ಗಳ ಸಂದರ್ಭದಲ್ಲಿ ಈ ಠೇವಣಿಯನ್ನು ಸರಿಹೊಂದಿಸಲಾಗುತ್ತದೆ. ಇ-ಹರಾಜು ಮಾರಾಟ ಪ್ರಕ್ರಿಯೆಗಳು ಮುಗಿದ ನಂತರ ಇ-ಹರಾಜು ಸೇವಾ ಪೂರೈಕೆದಾರರು/ಬ್ಯಾಂಕ್/ಹಣಕಾಸು ಸಂಸ್ಥೆಯಿಂದ ಅಂತಹ ವರದಿಯನ್ನು ಸ್ವೀಕರಿಸಿದ ನಂತರ ವಿಫಲ ಬಿಡ್ಡರ್‌ಗಳು ಮೇಲಿನ ಇ-ವ್ಯಾಲೆಟ್/ಸೇವಾ ಪೂರೈಕೆದಾರರಿಂದ ನೇರವಾಗಿ ಇಎಂಡಿಯನ್ನು ಹಿಂತಿರುಗಿಸಬೇಕು.

13. ಟೆಂಡರ್ ದಾಖಲೆಯಲ್ಲಿ ನೀಡಲಾದ ನಿಗದಿತ ಸ್ವರೂಪದಲ್ಲಿರುವ ಬಿಡ್‌ಗಳನ್ನು ಇ-ಹರಾಜು ಸೇವಾ ಪೂರೈಕೆದಾರರ ಪೋರ್ಟಲ್ ಮೂಲಕ "ಆನ್‌ಲೈನ್" ನಲ್ಲಿ ಸಲ್ಲಿಸಬೇಕು. ಇಲ್ಲದಿದ್ದರೆ ಸಲ್ಲಿಸಲಾದ ಬಿಡ್/ಗಳು ಪರಿಗಣನೆಗೆ ಅರ್ಹವಾಗಿರುವುದಿಲ್ಲ ಮತ್ತು ತಕ್ಷಣವೇ ತಿರಸ್ಕರಿಸಲಾಗುತ್ತದೆ. ಮಾರಾಟ ಸೂಚನೆ/ಟೆಂಡರ್ ದಾಖಲೆಯಲ್ಲಿ ನೀಡಲಾದ ಕೊನೆಯ ದಿನಾಂಕ ಮತ್ತು ಸಮಯದ ಮೊದಲು ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು. ಬಿಡ್ ಫಾರ್ಮ್/ಗಳನ್ನು ಎಲ್ಲಾ ಸಂಬಂಧಿತ ವಿವರಗಳೊಂದಿಗೆ ಸರಿಯಾಗಿ ಭರ್ತಿ ಮಾಡಬೇಕು. ವಿದೇಶದಲ್ಲಿ ನೆಲೆಸಿರುವ ಬಿಡ್ಡರ್‌ಗಳು/NRI/PIOಗಳು/ದ್ವಿಪೌರತ್ವ ಹೊಂದಿರುವ ಬಿಡ್ಡರ್‌ಗಳು ತಮ್ಮ ಮಾನ್ಯ ಭಾರತೀಯ ಪಾಸ್‌ಪೋರ್ಟ್‌ನ ಫೋಟೋ ಪುಟವನ್ನು ಸಲ್ಲಿಸಬೇಕು.

14. ಸಂಭಾವ್ಯ ಬಿಡ್ಡರ್‌ಗಳು, ಸೇವಾ ಪೂರೈಕೆದಾರರು **baanknet.com** ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಬಳಕೆದಾರ ಐಡಿ / ಪಾಸ್‌ವರ್ಡ್ ಅನ್ನು ಮುಂಚಿತವಾಗಿ ಪಡೆಯಬೇಕು, ಇದು ಇ-ಹರಾಜು ಸೇವಾ ಪೂರೈಕೆದಾರರ ಮೂಲಕ ಮೇಲಿನ ಇ-ಹರಾಜಿನಲ್ಲಿ ಬಿಡ್ ಮಾಡಲು ಕಡ್ಡಾಯವಾಗಿದೆ.

15. ಹರಾಜು/ಬಿಡ್ಡಿಂಗ್ ಸೇವಾ ಪೂರೈಕೆದಾರರು ಒದಗಿಸಿದ ಪೋರ್ಟಲ್ ಮೂಲಕ **"ಆನ್‌ಲೈನ್"** ನಲ್ಲಿ ಮಾತ್ರ ನಡೆಯುತ್ತದೆ. ಬಿಡ್‌ದಾರರು ಬಿಡ್ ಮೊತ್ತವನ್ನು ನಮೂದಿಸುವಾಗ ಜಾಗರೂಕರಾಗಿರಲು ಮತ್ತು ಅದನ್ನು ದೃಢೀಕರಿಸುವ ಮೊದಲು ಏನಾದರೂ ಬದಲಾವಣೆಯಾಗಿದ್ದರೆ ಪರಿಶೀಲಿಸಲು ವಿನಂತಿಸಲಾಗಿದೆ. ಮಾರಾಟವನ್ನು ರದ್ದುಗೊಳಿಸಲು ತಮ್ಮ ಬಿಡ್ಡಿಂಗ್‌ನ ಯಾವುದೇ ವಿನಂತಿ/ದೂರುಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಅಂತಹ ಸಂದರ್ಭದಲ್ಲಿ, ಪೂರ್ಣ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಬಿಡ್‌ದಾರರು ಇ-ಹರಾಜು ಸೇವಾ ಪೂರೈಕೆದಾರರ ಷರತ್ತುಗಳಿಗೆ ಒಳಪಟ್ಟು, ಹರಾಜಿನ ಪೂರ್ವ ತರಬೇತಿ ಮತ್ತು/ಅಥವಾ ಸೇವಾ ಪೂರೈಕೆದಾರರಿಂದ ಡೆಮೊ/ಅಣಕು ಹರಾಜು ಮಾರಾಟಕ್ಕಾಗಿ ಪಡೆಯಬಹುದು.

16. ಮಾರಾಟವನ್ನು 30 ದಿನಗಳಿಗಿಂತ ಕಡಿಮೆ ಅವಧಿಗೆ ಮುಂದೂಡಿದರೆ, ಹೊಸ ಮಾರಾಟ ಸೂಚನೆಯನ್ನು ನೀಡಲಾಗುವುದಿಲ್ಲ. ಆದಾಗ್ಯೂ, ಮಾರಾಟದ ಹೊಸ ದಿನಾಂಕವನ್ನು ನ್ಯಾಯಮಂಡಳಿಯ ನೋಟಿಸ್ ಬೋರ್ಡ್‌ನಲ್ಲಿ ತಿಳಿಸಲಾಗುತ್ತದೆ.

17. ಹರಾಜಾದ ಆಸ್ತಿಯ ಸ್ವಾಧೀನದ ವಿತರಣೆಯು ಆದಾಯ ತೆರಿಗೆ (ಪ್ರಮಾಣಪತ್ರ ಪ್ರಕ್ರಿಯೆಗಳು) ನಿಯಮಗಳು, 1962 ರ ಪ್ರಕಾರ ಇರುತ್ತದೆ. ಅದಕ್ಕೆ ಸಂಬಂಧಿಸಿದ ಎಲ್ಲಾ ವೆಚ್ಚಗಳು ಮತ್ತು ಪ್ರಾಸಂಗಿಕ ಶುಲ್ಕಗಳನ್ನು ಖರೀದಿದಾರರು ಭರಿಸುತ್ತಾರೆ. ಹರಾಜು ಖರೀದಿದಾರರು ಟೈಟಲ್ ಡೀಡ್‌ಗಳನ್ನು ಸ್ವೀಕರಿಸಿದ ಮತ್ತು ಹರಾಜಾದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಿದ ನಂತರವೇ ಪ್ರಮಾಣಪತ್ರ ಹೊಂದಿರುವ ಬ್ಯಾಂಕ್ ಮಾರಾಟದ ಆದಾಯವನ್ನು ಬಿಡುಗಡೆ ಮಾಡುವ ವಿನಂತಿಯನ್ನು ಪರಿಗಣಿಸಲಾಗುತ್ತದೆ.

18. ಹರಾಜಿನಲ್ಲಿ ಭಾಗವಹಿಸಲು ಉದ್ದೇಶಿಸಿರುವವರು, ಹರಾಜು ಮಾರಾಟದ ದಿನಾಂಕಕ್ಕೂ ಮುನ್ನ ವಿವರವಾದ ನಿಯಮಗಳು ಮತ್ತು ಷರತ್ತುಗಳು, ವಿಚಾರಣೆಗಳು, ಬಾಕಿ ಇರುವ ಕಾನೂನು ವಿವಾದಗಳ ಮಾಹಿತಿ, ಮಾರ್ಗದರ್ಶನ, ನಿಗದಿತ ಆಸ್ತಿಯ ಪರಿಶೀಲನೆ, ಹಾಗೂ ಮಾಲೀಕತ್ವದ ದಾಖಲೆಗಳು ಮತ್ತು ಇತ್ತೀಚಿನ ಋಣಭಾರರಹಿತ ಪ್ರಮಾಣಪತ್ರಗಳ ಪರಿಶೀಲನೆಗೆಗಾಗಿ ಕೋಲಾರ ದೇವರಾಯಸಮುದ್ರ ಶಾಖೆಯ ವ್ಯವಸ್ಥಾಪಕ/ಮುಖ್ಯಸ್ಥರಾದ ಶ್ರೀ ವೇಮಯ್ಯ ಕೋಲಸನಹಳ್ಳಿ ಅವರನ್ನು (ಸಂಪರ್ಕ ಮೊಬೈಲ್ ಸಂಖ್ಯೆ: 9494882484, 08159-235221, ಇ-ಮೇಲ್ ಐಡಿ: vjdeko@bankofbaroda.co.in ಮೂಲಕ ಸಂಪರ್ಕಿಸಲು ಸೂಚಿಸಲಾಗಿದೆ. ಆ ಮೂಲಕ ಅವರು ಸೂಕ್ತ ಪರಿಶೀಲನೆ ನಡೆಸಿ, ಹರಾಜಿಗೆ ಒಳಪಟ್ಟಿರುವ ಆಸ್ತಿಯ ಮಾಲೀಕತ್ವದ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಕೆಳಗೆ ಸಹಿ ಮಾಡಿದವರಿಂದ ಯಾರ ಪರವಾಗಿ ಮಾರಾಟವನ್ನು ಖಚಿತಪಡಿಸಲಾಗುತ್ತದೆಯೋ, ಅಂತಹ ಯಶಸ್ವಿ ಬಿಡ್ಡದಾರರಿಗೆ ಬ್ಯಾಂಕ್ ಶಾಖಾ ಮುಖ್ಯಸ್ಥರು ಹರಾಜಾದ ಆಸ್ತಿ ಮತ್ತು ಅದಕ್ಕೆ ಸಂಬಂಧಿಸಿದ ಮಾಲೀಕತ್ವದ ದಾಖಲೆಗಳನ್ನು (ಯಾವುದಾದರೂ ಇದ್ದರೆ) ಹಸ್ತಾಂತರಿಸುತ್ತಾರೆ.

19. ಯಾವುದೇ ಕಾರಣವನ್ನೂ ನೀಡದೆ ಹರಾಜನ್ನು ಮುಂದೂಡುವ ಅಥವಾ ರದ್ದುಗೊಳಿಸುವ ಹಕ್ಕನ್ನು, ಹಾಗೂ ಅಸಮಂಜಸವೆಂದು ಕಂಡುಬರುವ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿರುತ್ತಾರೆ.

20. ಅನುಬಂಧದಲ್ಲಿ ಒಂದಕ್ಕಿಂತ ಹೆಚ್ಚು ಐಟಂಗಳು/ಆಸ್ತಿಗಳಿದ್ದಲ್ಲಿ, ಆಸ್ತಿಯನ್ನು ಅನುಬಂಧದಲ್ಲಿ ನಿರ್ದಿಷ್ಟಪಡಿಸಿದಂತೆ ಲಾಟ್‌ಗಳು/ ಐಟಂಗಳು ರೂಪದಲ್ಲಿ ಮಾರಾಟಕ್ಕೆ ಇಡಲಾಗುವುದು. ಆಸ್ತಿಯ ಒಂದು ಭಾಗ/ವಸ್ತುವಿನ ಮಾರಾಟದಿಂದಲೇ ನಿರೀಕ್ಷಿತ ಮೊತ್ತವು ಲಭ್ಯವಾದರೆ, ಉಳಿದ ಆಸ್ತಿಯ ಮಾರಾಟವನ್ನು ತಕ್ಷಣವೇ ನಿಲ್ಲಿಸಲಾಗುವುದು. ಅಲ್ಲದೆ, ಯಾವುದೇ ಲಾಟ್‌ನ ಮಾರಾಟವನ್ನು ಅಂತಿಮಗೊಳಿಸುವ ಮೊದಲು, ಸಂಬಂಧಿತ ಪ್ರಮಾಣಪತ್ರದಲ್ಲಿ ನಮೂದಿಸಲಾದ ಬಾಕಿ ಮೊತ್ತ, ಬಡ್ಡಿ ಮತ್ತು ವೆಚ್ಚಗಳನ್ನು (ಮಾರಾಟದ ವೆಚ್ಚವನ್ನೂ ಒಳಗೊಂಡಂತೆ) ಮಾರಾಟ ನಡೆಸುತ್ತಿರುವ ಅಧಿಕಾರಿಗೆ ಪಾವತಿಸಿದರೆ, ಅಥವಾ ಅಂತಹ ಪ್ರಮಾಣಪತ್ರದ ಮೊತ್ತ, ಬಡ್ಡಿ ಮತ್ತು ವೆಚ್ಚಗಳನ್ನು ಕೆಳಗೆ ಸಹಿ ಮಾಡಿದವರಿಗೆ ಪಾವತಿಸಲಾಗಿದೆ ಎಂಬುದಕ್ಕೆ ತೃಪ್ತಿದಾಯಕ ಪುರಾವೆಯನ್ನು ಒದಗಿಸಿದರೆ, ಮಾರಾಟ ಪ್ರಕ್ರಿಯೆಯನ್ನು ನಿಲ್ಲಿಸಲಾಗುವುದು.

21. ಈ ಮಾರಾಟವು ಆದಾಯ ತೆರಿಗೆ ಕಾಯಿದೆ, 1961ರ ಎರಡನೇ ಅನುಸೂಚಿಯಲ್ಲಿ ನಿಗದಿಪಡಿಸಿದ ಷರತ್ತುಗಳು ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳಿಗೆ ಹಾಗೂ ಈ ಕೆಳಗಿನ ಹೆಚ್ಚುವರಿ ಷರತ್ತುಗಳಿಗೆ ಒಳಪಟ್ಟಿರುತ್ತದೆ: ಲಗತ್ತಿಸಲಾದ ಅನುಸೂಚಿಯಲ್ಲಿ ನಮೂದಿಸಲಾದ ವಿವರಗಳನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಯು ತಮ್ಮಲ್ಲಿರುವ ಮಾಹಿತಿಯ ಮೇರೆಗೆ ಒದಗಿಸಿದ್ದಾರೆ; ಆದರೆ ಈ ಪ್ರಕಟಣೆಯಲ್ಲಿ ಕಂಡುಬರುವ ಯಾವುದೇ ದೋಷ, ತಪ್ಪು ಹೇಳಿಕೆ ಅಥವಾ ಲೋಪಗಳಿಗೆ ಸಹಿ ಮಾಡಿದ ಅಧಿಕಾರಿಯು ಜವಾಬ್ದಾರರಾಗಿರುವುದಿಲ್ಲ.

22. ಯಶಸ್ವಿ/ಅತ್ಯಧಿಕ ಬಿಡ್‌ದಾರರನ್ನು ಯಾವುದೇ ಲಾಟ್/ಐಟಂನ ಖರೀದಿದಾರರೆಂದು ಘೋಷಿಸಲಾಗುವುದು; ಆದರೆ ಅವರು ನಮೂದಿಸಿದ ಬಿಡ್/ಖರೀದಿ ಮೊತ್ತವು ಮೀಸಲು ಬೆಲೆಗಿಂತ ಕಡಿಮೆಯಿರಬಾರದು. ನೀಡಲಾದ ಬೆಲೆಯು ಅತ್ಯಂತ ಕಡಿಮೆ ಅಥವಾ ಅಸಮರ್ಪಕವೆಂದು ಕಂಡುಬಂದಲ್ಲಿ, ಅಂತಹ ಬಿಡ್ ಅನ್ನು ಸ್ವೀಕರಿಸದಿರುವ ನಿರ್ಧಾರವನ್ನು ತೆಗೆದುಕೊಳ್ಳುವ ವಿವೇಚನಾ ಅಧಿಕಾರವು ಈ ಕೆಳ ಸಹಿ ಮಾಡಿದ ಅಧಿಕಾರಿಗೆ ಇರುತ್ತದೆ.

23. ಯಶಸ್ವಿ/ಅತ್ಯಧಿಕ ಬಿಡ್‌ದಾರರು ಖರೀದಿಯ ಮೊತ್ತದ 25% ರಷ್ಟು ಹಣವನ್ನು (ಬಿಡ್ ಮೊತ್ತವನ್ನೂ ಒಳಗೊಂಡಂತೆ) RTGS/NEFT/ ಫಂಡ್ ಟ್ರಾನ್ಸ್‌ಫರ್ ಮೂಲಕ E-Auction collection account No. 849221110000004, BANK OF INDIA, BASAVESHWARNAGAR BRANCH, BENGALURU, IFSC Code No BKID0008492' ಖಾತೆಗೆ ಮರುದಿನ **ಸಂಜೆ 4.00 ಗಂಟೆಯೊಳಗೆ** ಪಾವತಿಸಬೇಕು. ಮರುದಿನ ರಜಾದಿನ ಅಥವಾ ಭಾನುವಾರವಾಗಿದ್ದಲ್ಲಿ, ನಂತರದ ಮೊದಲ ಕೆಲಸದ ದಿನದಂದು ಮೇಲಿನ ಖರೀದಿ ಮೊತ್ತವನ್ನು ಜಮೆ ಮಾಡಬೇಕು; ತಪ್ಪಿದಲ್ಲಿ, ಭದ್ರತಾ ಠೇವಣಿ (EMD) ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

24. ಇದಲ್ಲದೆ, ಯಶಸ್ವಿ/ಅತ್ಯಧಿಕ ಬಿಡ್‌ದಾರರು (ಖರೀದಿದಾರರು), ಆಸ್ತಿಯ ಹರಾಜಿನ ದಿನಾಂಕದಿಂದ 15 ದಿನಗಳ ಒಳಗಾಗಿ (ಹರಾಜಿನ ದಿನವನ್ನು ಹೊರತುಪಡಿಸಿ), ಬಾಕಿ ಇರುವ 75% ಖರೀದಿ/ಮಾರಾಟದ ಮೊತ್ತವನ್ನು 'Recovery Officer-1, DRT-2, Bengaluru' ಅವರ ಹೆಸರಿನಲ್ಲಿರುವ 'BANK OF INDIA, BASAVESHWARNAGAR BRANCH, BENGALURU' (ಖಾತೆ ಸಂಖ್ಯೆ: 849221110000004, IFSC ಕೋಡ್: BKID0008492) ಗೆ NEFT/RTGS ಮೂಲಕ ಪಾವತಿಸಬೇಕು. ಒಂದು ವೇಳೆ 15ನೇ ದಿನವು ಭಾನುವಾರ ಅಥವಾ ಸಾರ್ವಜನಿಕ ರಜಾದಿನವಾಗಿದ್ದರೆ, ಆ ನಂತರದ ಮೊದಲ ಕೆಲಸದ ದಿನದಂದು ಪಾವತಿಸಬೇಕು. ಇದರೊಂದಿಗೆ, ಖರೀದಿ/ಮಾರಾಟದ ಮೊತ್ತದ ಮೇಲೆ 'ಪೌಂಡೇಜ್ ಶುಲ್ಕ' ರೂ. 1,000 ವರೆಗಿನ ಮೊತ್ತಕ್ಕೆ 2% ಪಾವತಿಸಬೇಕು ಮತ್ತು ರೂ. 1,000 ಕ್ಕಿಂತ ಹೆಚ್ಚಿನ ಮೊತ್ತಕ್ಕೆ 1% ರಂತೆ. ಈ ಶುಲ್ಕವನ್ನು 'Recovery Officer-1, DRT-2, Bengaluru' ಅವರ ಪರವಾಗಿ ಆನ್‌ಲೈನ್ ಮೂಲಕ (www.bharatkosh.gov.in) ಪಾವತಿಸಬೇಕು, ಇದಕ್ಕಾಗಿ ಈ ಕೆಳಗಿನ ವಿವರಗಳನ್ನು ಆಯ್ಕೆ ಮಾಡಿಕೊಳ್ಳಬೇಕು:

Ministry- Department of Financial Services-Functional Head-Service Fees-POA CODE 006701, PAO, DFS, Nagpur ಮತ್ತು **DDO code 208095, SO/DRT 2, Bengaluru.**

25. ಮೇಲೆ ತಿಳಿಸಿದ ನಿಗದಿತ ಅವಧಿಯೊಳಗೆ ಪಾವತಿ ಮಾಡಲು ವಿಫಲವಾದರೆ, ಮಾರಾಟದ ಹೊಸ ಘೋಷಣೆಯನ್ನು ಹೊರಡಿಸಿದ ನಂತರ ಆಸ್ತಿಯನ್ನು ಮರು-ಮಾರಾಟ ಮಾಡಲಾಗುತ್ತದೆ. ಮಾರಾಟದ ವೆಚ್ಚಗಳನ್ನು ಭರಿಸಿದ ನಂತರ, ಸಹಿ ಮಾಡಿದ ಅಧಿಕಾರಿ (ಅಧಿಕೃತ ಅಧಿಕಾರಿ) ಸೂಕ್ತವೆಂದು ಭಾವಿಸಿದರೆ, ಠೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದು. ಪಾವತಿಸಲು ವಿಫಲರಾದ ಖರೀದಿದಾರರು ಆಸ್ತಿಯ ಮೇಲಿನ ಅಥವಾ ನಂತರದ ಮಾರಾಟದಿಂದ ಬರುವ ಮೊತ್ತದ ಮೇಲಿನ ತಮ್ಮ ಎಲ್ಲಾ ಹಕ್ಕುಗಳನ್ನು ಕಳೆದುಕೊಳ್ಳುತ್ತಾರೆ. ತುರ್ತು ಸಂದರ್ಭಗಳು ಉದ್ಭವಿಸಿದಾಗ ಪಾವತಿ ವೇಳಾಪಟ್ಟಿಯನ್ನು ಮಾರ್ಪಡಿಸುವ/ಬದಲಾಯಿಸುವ ಅಧಿಕಾರವನ್ನು ಸಹಿ ಮಾಡಿದ ಅಧಿಕಾರಿ ಹೊಂದಿರುತ್ತಾರೆ.

26. ಅಂತಹ ಯಶಸ್ವಿ ಹರಾಜು ಖರೀದಿದಾರರು ಪಾವತಿಸಬೇಕಾದ ಇಎಂಡಿ ಮತ್ತು ನಂತರದ ಡಿಮ್ಯಾಂಡ್ ಡ್ರಾಫ್ಟ್‌ಗಳು ಯಾವುದಾದರೂ ಇದ್ದರೆ, ಅವುಗಳನ್ನು ಬ್ಯಾಂಕ್ ಆಫ್ ಇಂಡಿಯಾ, ಬಸವೇಶ್ವರನಗರ ಶಾಖೆ, ಬೆಂಗಳೂರು, ಅಧಿಕೃತ ಅಧಿಕಾರಿ/ಬ್ಯಾಂಕಿನ ಶಾಖಾ ಮುಖ್ಯಸ್ಥರು (ಬ್ಯಾಂಕ್‌ನಲ್ಲಿ ಇ-ಹರಾಜು ಸಂಗ್ರಹ ಖಾತೆಯನ್ನು ನಿರ್ವಹಿಸುತ್ತಾರೆ) ಕೆಳಗೆ ಸಹಿ ಮಾಡಿದವರಿಂದ ಸಂಗ್ರಹಿಸಬೇಕು. ಅವರು ಅಂತಹ ಯಶಸ್ವಿ ಬಿಡ್ಡರ್‌ರ ಇಎಂಡಿ ಮತ್ತು ಅಂತಹ ಮಾರಾಟಕ್ಕೆ ಪಾವತಿಸಬೇಕಾದ ಉಳಿದ ಮೊತ್ತವನ್ನು ರಿಕವರಿ ಅಧಿಕಾರಿಯ ನಿರ್ದೇಶನದಂತೆ 15 ದಿನಗಳ ಒಳಗೆ ಎಫ್‌ಡಿಆರ್ ರೂಪದಲ್ಲಿ ಪಾವತಿಸಲು ಜವಾಬ್ದಾರರಾಗಿರುತ್ತಾರೆ ಮತ್ತು ಅಂತಹ ಮೂಲ ಎಫ್‌ಡಿಆರ್ ಅನ್ನು ಸಹ ದಾಖಲೆಗಳಿಗಾಗಿ ಕೆಳಗೆ ಸಹಿ ಮಾಡಿದವರ ಮುಂದೆ ಸಲ್ಲಿಸಬೇಕು. ಈ ನ್ಯಾಯಮಂಡಳಿಯಿಂದ ಮಾರಾಟ ದೃಢೀಕರಣದ ನಂತರ, ಇಎಂಡಿ ಮೇಲಿನ ಬಡ್ಡಿ ಮತ್ತು ಅಂತಹ ಮಾರಾಟದ ನಂತರದ ಪಾವತಿಯು ಎಫ್‌ಡಿ ಖಾತೆಯಲ್ಲಿ ಸಂಗ್ರಹವಾಗುತ್ತದೆ ಮತ್ತು ಬಿಡ್ ಮೊತ್ತ/ಇಎಂಡಿ ಮೇಲಿನ ಅಂತಹ ಬಡ್ಡಿಗಾಗಿ ಅಂತಹ ಯಶಸ್ವಿ ಹರಾಜು ಖರೀದಿದಾರರಿಂದ ಯಾವುದೇ ಕ್ಲೈಮ್ ಅನ್ನು ಸ್ವೀಕರಿಸಲಾಗುವುದಿಲ್ಲ.

27. ಮಾರಾಟ ಮಾಡಲು ಪ್ರಸ್ತಾಪಿಸಲಾದವುಗಳು ಪ್ರಮಾಣೀಕೃತ ಸಾಲಗಾರರು ಆಸ್ತಿಗಳ ವಿಷಯದಲ್ಲಿ ಹೊಂದಿರುವ ಹಕ್ಕುಗಳಾಗಿವೆ. ಆಸ್ತಿಗಳನ್ನು ಹೊಣೆಗಾರಿಕೆಗಳೊಂದಿಗೆ ಮಾರಾಟ ಮಾಡಲಾಗುತ್ತದೆ, ಯಾವುದಾದರೂ ಇದ್ದರೆ. ಘೋಷಣೆಯಲ್ಲಿ ತೋರಿಸಿರುವ ಆಸ್ತಿಗಳ ವ್ಯಾಪ್ತಿಯು ಮೇಲಿನ ಪ್ರಕ್ರಿಯೆಯಲ್ಲಿ ಟಿಆರ್‌ಸಿ/ಡಿಸಿಪಿ/ ಆರ್‌ಸಿ/ ಜಪ್ತಿ ಮಾಡಿದ ಆಸ್ತಿಯ ಪ್ರಕಾರವಾಗಿದೆ. ಯಾವುದೇ ಕಾರಣದಿಂದ ಉಂಟಾಗುವ ಯಾವುದೇ ವ್ಯತ್ಯಾಸಕ್ಕೆ ಕೆಳಗೆ ಸಹಿ ಮಾಡಿದ ಪ್ರಾಧಿಕಾರವು ಜವಾಬ್ದಾರನಾಗಿರುವುದಿಲ್ಲ. ಆಸ್ತಿಯನ್ನು **"ಎಲ್ಲಿ ಇದೆಯೋ ಹಾಗೆಯೇ" ಮತ್ತು "ಏನಿದೆಯೋ ಹಾಗೆಯೇ" ಮತ್ತು "ಯಾವುದೇ ದೂರು ಆಧಾರವಿಲ್ಲ"**, ಉದ್ದೇಶಿತ ಬಿಡ್ಡರ್‌ಗಳು ಬ್ಯಾಂಕಿನಲ್ಲಿ ಲಭ್ಯವಿರುವ ಶೀರ್ಷಿಕೆ ಪತ್ರಗಳ ಪ್ರತಿಗಳನ್ನು ಪರಿಶೀಲಿಸಲು ಮತ್ತು ಸರ್ವೆ ಸಂಖ್ಯೆ, ಚಾಲ್ತಿಯಲ್ಲಿರುವ, ಹೊರೆಗಳು, ವೇಳಾಪಟ್ಟಿ ಆಸ್ತಿಯ ಪರಿಶೀಲನೆ ಮತ್ತು ಬಾಕಿ ಇರುವ ಮೊಕದ್ದಮೆಗಳು ಸೇರಿದಂತೆ ಆಸ್ತಿ ವಿವರಗಳ ಗುರುತು ಮತ್ತು ಸರಿಯಾದತೆಯನ್ನು ಪರಿಶೀಲಿಸಲು ಸೂಚಿಸಲಾಗಿದೆ.

28. ವಿವರವಾದ ನಿಯಮಗಳು ಮತ್ತು ಷರತ್ತುಗಳು ಈ ಮಾರಾಟದ ಪ್ರಕಟಣೆಯ ಅವಿಭಾಜ್ಯ ಅಂಗವಾಗಿದ್ದು, ಅವುಗಳನ್ನು ಇದರೊಂದಿಗೆ **'ಅನುಬಂಧ-ಎ'** ಆಗಿ ಲಗತ್ತಿಸಲಾಗಿದೆ.

29. ಈ ಮಾರಾಟವು ಮೇಲೆ ಹೆಸರಿಸಲಾದ ಪ್ರಮಾಣೀಕೃತ ಸಾಲಗಾರರ ಆಸ್ತಿಗೆ ಸಂಬಂಧಿಸಿದ್ದಾಗಿದ್ದು, ಸದರಿ ಆಸ್ತಿಗೆ ಅನ್ವಯಿಸುವ ಹೊಣೆಗಾರಿಕೆಗಳು ಮತ್ತು ಹಕ್ಕುಬಾಧ್ಯತೆಗಳು ಇಲ್ಲಿಯವರೆಗೆ ನಿರ್ಧರಿಸಲಾದ ಮಟ್ಟಿಗೆ ಈ ಕೆಳಗೆ ನಿರ್ದಿಷ್ಟಪಡಿಸಿದಂತೆಯೇ ಇರುತ್ತದೆ.

ಆರ್‌ಸಿ ಪ್ರಕಾರ ಆಸ್ತಿಯ ವಿವರಗಳು	ಮಾರಾಟವಾಗಲಿರುವ ಆಸ್ತಿ(ಗಳ) ವಿವರಣೆ ಮತ್ತು ಮಾಲೀಕರ ಹೆಸರುಗಳು (ಆಸ್ತಿಯು ಸಹ-ಸಾಲಗಾರ ಅಥವಾ ಬೇರೆ ಯಾವುದೇ ಮಾಲೀಕರಿಗೆ ಸೇರಿದ್ದಲ್ಲಿ ಅವರ ವಿವರಗಳು).	ಆಸ್ತಿ ಅಥವಾ ಅದರ ಯಾವುದೇ ಭಾಗದ ಮೇಲೆ ವಿಧಿಸಲಾದ ಕಂದಾಯ.	ಆಸ್ತಿಯ ಮೇಲಿರುವ ಯಾವುದೇ ರೀತಿಯ ಹೊಣೆಗಾರಿಕೆಗಳು ಅಥವಾ ಋಣಭಾರಗಳ ವಿವರಗಳು.	ಆಸ್ತಿಯ ಮೇಲೆ ಸಲ್ಲಿಸಲಾದ ಯಾವುದೇ ಹಕ್ಕು ಪ್ರತಿಪಾದನೆಗಳು ಹಾಗೂ ಅದರ ಸ್ವರೂಪ ಮತ್ತು ಮೌಲ್ಯಕ್ಕೆ ಸಂಬಂಧಿಸಿದ ಇತರ ತಿಳಿದಿರುವ ವಿವರಗಳು.	ಮೀಸಲು ಬೆಲೆ	ಇಎಂಡಿ
ದಯವಿಟ್ಟು ಕೆಳಗೆ ನಮೂದಿಸಲಾದ ವಿವರಗಳನ್ನು ನೋಡಿ.	ದಯವಿಟ್ಟು ಕೆಳಗೆ ನಮೂದಿಸಲಾದ ವಿವರಗಳನ್ನು ನೋಡಿ.	ಕಂದಾಯ ಪ್ರಾಧಿಕಾರದಿಂದ ನಿರ್ಧರಿಸಲಾದಂತೆ.	ಬ್ಯಾಂಕ್ ಯಾವುದೇ ವಿವರಗಳನ್ನು ಸಲ್ಲಿಸಿಲ್ಲ.	ಒ.ಎ.ನಂ.:241/2010ರ ಅಡಿಯಲ್ಲಿ ಟಿ1123/2017ರ ಪ್ರಕಾರ ಬ್ಯಾಂಕ್ ಆಫ್ ಬರೋಡಾ (ಹಿಂದಿನ ವಿಜಯಾ ಬ್ಯಾಂಕ್), ದೇವರಾಯಸಮುದ್ರ ಶಾಖೆಗೆ ಪಾವತಿಸಬೇಕಾದ ಬಾಕಿ ಮೊತ್ತ	ರೂ. 80,00,000/- (ಎಂಬತ್ತು ಲಕ್ಷ ರೂ.ಗಳು ಮಾತ್ರ)	ರೂ. 8,00,000/- (ಎಂಟು ಲಕ್ಷ ರೂ. ಮಾತ್ರ)

ಆರ್‌ಸಿ ಪ್ರಕಾರ ಸ್ಥಿರಾಸ್ತಿ ವಿವರ : ಆಸ್ತಿಯ ಎಲ್ಲಾ ಭಾಗಗಳೂ ಸೇರಿದಂತೆ ಕೋಲಾರ ಜಿಲ್ಲೆ, ಮುಳಬಾಗಿಲು ತಾಲೂಕು, ಬೈರಕೂರು ಹೋಬಳಿ, ಟಿ. ಕುರುಬರಹಳ್ಳಿ ಗ್ರಾಮದಲ್ಲಿರುವ, ಸರ್ವೆ ನಂ. 35 ಮತ್ತು ಹೊಸ ನಂ. 51 ರಲ್ಲಿ ಬರುವ ಒಟ್ಟು 4-00 ಎಕರೆ ವಿಸ್ತೀರ್ಣದ ಕೃಷಿ ಭೂಮಿ; ಇದರ **ಚೆಕ್ಕುಬಂದಿ: ಪೂರ್ವಕ್ಕೆ:** ಬದರಿನಾರಾಯಣ ಅವರ ಆಸ್ತಿ, **ಪಶ್ಚಿಮಕ್ಕೆ:** ಸರ್ಕಾರಿ ಭೂಮಿ, **ಉತ್ತರಕ್ಕೆ:** ಪಾಪಿರೆಡ್ಡಿ ಅವರ ಭೂಮಿ, **ದಕ್ಷಿಣಕ್ಕೆ:** ಆಂಧ್ರಪ್ರದೇಶದ ಗಡಿ.

ಇ-ಹರಾಜಿನ ದಿನಾಂಕ ಮತ್ತು ಸಮಯ: 17.08.2026 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ
ಆನ್‌ಲೈನ್ ಬಿಡ್/ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 11.08.2026 ರಂದು ಸಂಜೆ 4.00 ಗಂಟೆಗೆ
ಹರಾಜು ಬಿಡ್/ಟೆಂಡರ್‌ನ ಭೌತಿಕ ಪ್ರತಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 14.08.2026 ರಂದು ಸಂಜೆ 4.00 ಗಂಟೆಗೆ

ದಿನಾಂಕ: 24.06.2026 ರಂದು ನ್ಯಾಯಾಧೀಕರಣದ ಸಹಿ ಮತ್ತು ಆದೇಶದೊಂದಿಗೆ ನಮ್ಮ ಅಪ್ಪಣೆಯ ಮೇರೆಗೆ ಈ ಸೂಚನೆ ನೀಡಲಾಗಿದೆ. ಸಹಿ/-

ಲಗತ್ತಿಸಲಾಗಿದೆ: ಅನುಬಂಧ-ಎ - ನಿಯಮಗಳು ಮತ್ತು ಷರತ್ತುಗಳು.

ಸಾಲ ವಸೂಲಾತಿ ಅಧಿಕಾರಿ-1
ಡಿಆರ್‌ಟಿ-2 ಬೆಂಗಳೂರು

ಬ್ಯಾಂಕ್ ಆಫ್ ಬರೋಡ
बैंक ऑफ़ बड़ौदा
Bank of Baroda

ಬ್ಯಾಂಕ್ ಆಫ್ ಬರೋಡಾ, ಗೌರಿಬಿದನೂರು ಶಾಖೆ,
ಎನ್‌ವಿಆರ್ ಕಾಂಪ್ಲೆಕ್ಸ್, ಇಂಡಿಯನ್ ಆಯಿಲ್ ಪೆಟ್ರೋಲ್ ಪಂಪ್ ಎದುರು, ಬಿಎಚ್ ರಸ್ತೆ, ಗೌರಿಬಿದನೂರು, ಚಿಕ್ಕಬಳ್ಳಾಪುರ (ಜಿಲ್ಲೆ)-561208. ದೂರವಾಣಿ: 08155-286597
ಇಮೇಲ್ ಐಡಿ: vjgaur@bankofbaroda.com, ವೆಬ್‌ಸೈಟ್: www.bankofbaroda.com

ಆಸ್ತಿಗಳ ಮಾರಾಟದ ಸೂಚನೆ

ಅನುಬಂಧ-IV-A [ನಿಯಮ 6 (2) ಮತ್ತು 8 (6) ರ ನಿಬಂಧನೆಯನ್ನು ನೋಡಿ]

ಇ-ಹರಾಜು ಮಾರಾಟ ಪ್ರಕಟಣೆ ನಿಯಮ 6(2) & 8(6) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002 ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್ ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಸ್ಟ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ರಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ. ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ / ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ / ಚಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಆಸ್ತಿಗಳ ಅಧಿಕೃತ ಅಧಿಕಾರಿ, **ಬ್ಯಾಂಕ್ ಆಫ್ ಬರೋಡ** ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, " ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ" ಮಾರಾಟ ಮಾಡಲಾಗುವುದು. ಶಾಖೆ/ ಸಾಲಗಾರರ / ಜಾಮಿನುದಾರರ /ಅಡಮಾನದಾರರ ಆಸ್ತಿಯ ವಿವರ / ಬಾಕಿ ಮೊತ್ತ / ಮೀಸಲು ಬೆಲೆ / ಇ ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

ಕ್ರ. ಸಂ	ಸಾಲಗಾರ/ರು/ಖಾತರಿದಾರರು/ರು/ಮಾಲೀಕರು(ರು) ಹೆಸರು ಮತ್ತು ವಿಳಾಸ	ತಿಳಿದಿರುವ ಋಣಭಾರಗಳನ್ನು ಹೊಂದಿರುವ ಸ್ಥಿರ/ಚರ ಆಸ್ತಿಯ ವಿವರವಾದ ವಿವರಣೆ. ಯಾವುದಾದರೂ ಇದ್ದರೆ (ಮಾಲೀಕರು/ಅಡಮಾನದಾರರ ಹೆಸರು: ಶ್ರೀಮತಿ ಸುಶೀಲಾ ಕೋಂ ಚಿಕ್ಕಯ್ಯ)	ಒಟ್ಟು ಖರ್ಚುಗಳು	ಇ-ಹರಾಜಿನ ದಿನಾಂಕ ಮತ್ತು ಸಮಯ	ಮೀಸಲು ಬೆಲೆ, ಇಎಂಡಿ, ಇಎಂಡಿ ಮೊತ್ತದ ಕೊನೆಯ ದಿನಾಂಕ ಮತ್ತು ಬಿಡ್ ಹೆಚ್ಚಳ ಮೊತ್ತ	ಸ್ವಾಧೀನದ ಸ್ಥಿತಿ	ಆಸ್ತಿ ತಪಾಸಣೆ ದಿನಾಂಕ ಮತ್ತು ಸಮಯ
01	ಮೇ॥ ಸಂಪಯ್ಯ ಸೇವಾ ಕೇಂದ್ರವು ಪ್ಲಾಟ್ ನಂ.69 ಸೈನಂ 30-ಭಾಗ, ಗೌರಿಬಿದನೂರು, 2 ನೇ ಹಂತ, ಕೈಗಾರಿಕಾ ಪ್ರದೇಶ ಕುಡುಮಲಕುಂಟೆ ಗ್ರಾಮ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ-561208 ರಲ್ಲಿ **ನೋಂದಾಯಿತ ವಿಳಾಸವನ್ನು ಹೊಂದಿದೆ. ಇದರ ಮಾಲೀಕ ಶ್ರೀ ಚೇತನ್ ಬಿನ್ ಚಿಕ್ಕಯ್ಯ** ಪ್ರತಿನಿಧಿಸಿದ್ದಾರೆ, ನಿವಾಸ ವಿಳಾಸ #1235, 10ನೇ ಮುಖ್ಯ, 15ನೇ AA ಕ್ರಾಸ್, KHB ಸೂರ್ಯನಾರಾಯಣ ಹಂತ-I, ಚಂದಾಪುರ ಪೋಸ್ಟ್, ಆನೇಕಲ್ ತಾಲೂಕು, ಬೆಂಗಳೂರು-560081. 2) **ಶ್ರೀಮತಿ ಸುಶೀಲಾ ಕೋಂ ಚಿಕ್ಕಯ್ಯ** ನವರ ನಿವಾಸ ವಿಳಾಸ #1235, 10ನೇ ಮುಖ್ಯ, LIG-A, 15ನೇ AA ಕ್ರಾಸ್, KHB ಸೂರ್ಯನಾರಾಯಣ ಹಂತ-I, ಚಂದಾಪುರ ಪೋಸ್ಟ್, ಆನೇಕಲ್ ತಾಲ್ಲೂಕು, ಬೆಂಗಳೂರು-560081. 3) **ಎಸ್ ಕಿರಣ್ ಕುಮಾರ್** ವಾಸ ವಿಳಾಸ ನಂ.65, ಬೆಟ್ಟಹಳ್ಳಿ, ಕಡಬಗೆರೆ ಅಂಚೆ, ದಾಸನಪುರ ಹೋಬಳಿ, ಬೆಂಗಳೂರು ನಗರ-562130.	ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲೂಕು, ಇಗ್ಗಲೂರು-ಬನಹಿಲ್ಲು ಗ್ರಾಮಗಳಲ್ಲಿರುವ, ಕರ್ನಾಟಕ ಗೃಹ ಮಂಡಳಿಯು "ಸೂರ್ಯನಗರ" ಎಂಬ ಹೆಸರಿನಲ್ಲಿ ಅಭಿವೃದ್ಧಿಪಡಿಸಿದ ಪ್ರದೇಶದ LIG II ವಿಭಾಗದ ಮನೆ ಸಂಖ್ಯೆ 1235 ರಲ್ಲಿರುವ ವಸತಿ ಮನೆ ಆಸ್ತಿ, ಇದು ಪೂರ್ವ-ಪಶ್ಚಿಮವಾಗಿ 12.00 ಮೀಟರ್‌ಗಳು ಮತ್ತು ಉತ್ತರ-ದಕ್ಷಿಣವಾಗಿ 9.00 ಮೀಟರ್‌ಗಳ ಅಳತೆಯನ್ನು, ಒಟ್ಟು 108.00 ಚದರ ಮೀಟರ್ ವಿಸ್ತೀರ್ಣ ಹೊಂದಿದ್ದು, **ಶ್ರೀಮತಿ ಸುಶೀಲ ಕೋಂ ಚಿಕ್ಕಯ್ಯ** ಅವರ ಹೆಸರಿನಲ್ಲಿದೆ. **ಇದರ ಗಡಿಗಳು: ಪೂರ್ವಕ್ಕೆ:** ಲೇಔಟ್ ರಸ್ತೆ, **ಪಶ್ಚಿಮಕ್ಕೆ:** ಮನೆ ಸಂಖ್ಯೆ 1252 LIG Type B, **ಉತ್ತರಕ್ಕೆ:** ಮನೆ ಸಂಖ್ಯೆ 1234 LIG Type A, **ದಕ್ಷಿಣಕ್ಕೆ:** ಮನೆ ಸಂಖ್ಯೆ 1236 LIG Type A.	ರೂ. 73,43,421.71/- (ರೂಪಾಯಿ ಎಪ್ಪತ್ತಮೂರು ಲಕ್ಷದ ನಲವತ್ತಮೂರು ಸಾವಿರದ ನಾಲ್ಕು ನೂರ ಇಪ್ಪತ್ತೊಂದು ಮತ್ತು ಎಪ್ಪತ್ತೊಂದು ಪೈಸೆ ಮಾತ್ರ) **03-07-2025** ರಿಂದ ಪಾವತಿಯ ದಿನಾಂಕದವರೆಗೆ ಒಪ್ಪಂದದ ದರದಲ್ಲಿ ಹೆಚ್ಚಿನ ಬಡ್ಡಿ ಹಾಗೂ ವೆಚ್ಚಗಳು ಮತ್ತು ಶುಲ್ಕಗಳು.	**06-08-2026** ರಂದು ಮಧ್ಯಾಹ್ನ 2:00 ರಿಂದ ಸಂಜೆ 6:00 ರವರೆಗೆ	ಮೀಸಲು ಬೆಲೆ: ರೂ. 91,59,000.00/- ಇಎಂಡಿ: ರೂ. 9,15,900.00/- ಇಎಂಡಿ ಮೊತ್ತವನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 05-08-2026 ಸಂಜೆ 5:00 ಗಂಟೆಯೊಳಗೆ ಬಿಡ್ ಹೆಚ್ಚಳ ಮೊತ್ತ: ರೂ. 25,000.00/-	ಸಾಂಕೇತಿಕ ಸ್ವಾಧೀನ	ಅಧಿಕೃತ ಅಧಿಕಾರಿಯಿಂದ ಪೂರ್ವ ನೇಮಕಾತಿ ಯೊಂದಿಗೆ

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು **https://www.bankofbaroda.in/e-auction** ವೆಬ್‌ಸೈಟ್ ಲಿಂಕ್ ಮತ್ತು ಆನ್‌ಲೈನ್ ಹರಾಜು ಪೋರ್ಟಲ್ **Baanknet.com** ಅನ್ನು ನೋಡಿ/ಭೇಟಿ ನೀಡಿ. ಆಸ್ತಿ ತೆರಿಗೆ, ಇ-ಖಾತಾ ಶುಲ್ಕಗಳು, ಸೊಸೈಟಿಯ ನಿರ್ವಹಣಾ ಶುಲ್ಕಗಳು, ವಿದ್ಯುತ್ ಶುಲ್ಕಗಳು ಮತ್ತು ಅತಿ ಹೆಚ್ಚು ಬಿಡ್ದಾರರು ವಿಧಿಸಬೇಕಾದ ಯಾವುದೇ ಇತರ ಕಾನೂನು ಶುಲ್ಕಗಳಿಗೆ ಸಂಬಂಧಿಸಿದ ಬಾಕಿ ಶುಲ್ಕಗಳು. ಅಲ್ಲದೆ, ಸಂಭಾವ್ಯ ಬಿಡ್ದಾರರು ಅಧಿಕೃತ ಅಧಿಕಾರಿಯನ್ನು ಸಂಪರ್ಕಿಸಬಹುದು ವಿಚಾರಣೆಗಳಿಗಾಗಿ **ದೂರವಾಣಿ ಸಂಖ್ಯೆ: 081 36245779, ಮೊಬೈಲ್: 9059619651** ಮತ್ತು ಇಮೇಲ್ ಐಡಿ. **support.BAANKNET@psballiance.com**

ದಿನಾಂಕ: 14-07-2026
ಸ್ಥಳ: ಬೆಂಗಳೂರು

ಶ್ರೀ ಮಾರಲ ವಿದ್ಯಾಸಾಗರ್
ಅಧಿಕೃತ ಅಧಿಕಾರಿ ಹಾಗೂ ಉಪ ಪ್ರಾದೇಶಿಕ ವ್ಯವಸ್ಥಾಪಕರು, ಪ್ರಾದೇಶಿಕ ಕಚೇರಿ, ಬೆಂಗಳೂರು ಗ್ರಾಮಾಂತರ ಪ್ರದೇಶ